# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 253 (294) |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11.12.2024 |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕ್ರೈಸ್ತ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಪ್ರಾರಂಭಿಸಲು ರೂ.200 ಕೋಟಿ ಅನುದಾನವನ್ನು ಕಳೆದ 2024-25 ಬಜೆಟ್ ನಲ್ಲಿ ಘೋಷಿಸಿದ್ದರೂ ಇನ್ನೂ ನಿಗಮ ಕಾರ್ಯನಿರ್ವಹಿಸದೇ ಇರಲು ಕಾರಣಗಳೇನು; | ಆಯವ್ಯಯ ಭಾಷಣ ಕಂಡಿಕೆ-182 ರಂತೆ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮ ಸ್ಥಾಪಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ನೋಂದಣಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |
| ಆ) | ನಿಗಮ ಪ್ರಾರಂಭಿಸಲು ಇಲಾಖೆಗೆ ಇರುವ ಅಡಚಣೆಗಳೇನು; ಕ್ರೈಸ್ತ ಸಮುದಾಯದ ರೂ.200 ಕೋಟಿಗಳನ್ನು ಯಾವ ಯಾವ ಉದ್ದೇಶಕ್ಕಾಗಿ ಬಳಕೆ ಮಾಡಲಾಗಿದೆ; | ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ನೋಂದಣಿ ಮಾಡುವ ಪ್ರಕ್ರಿಯೆಯು ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಜಾಲತಾಣದಲ್ಲಿ ವಿವಿಧ ಹಂತಗಳನ್ನು ಒಳಗೊಂಡಿದ್ದು, ನೋಂದಣಿ ಕಾರ್ಯ ಪ್ರಗತಿಯಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.<br><br>2024-25ನೇ ಸಾಲಿನ ಆಯವ್ಯಯದಲ್ಲಿ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗಾಗಿ ರೂ.200.00 ಕೋಟಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿದ್ದು, ಈ ಪೈಕಿ ರೂ.85.00 ಕೋಟಿಗಳನ್ನು ಒದಗಿಸಲಾಗಿದೆ. ಕ್ರಿಶ್ಚಿಯನ್ ಸಮುದಾಯದ ಈ ಕೆಳಕಂಡ ಉದ್ದೇಶಗಳಿಗೆ ಅನುದಾನ ಬಳಕೆ ಮಾಡಲಾಗುತ್ತಿದೆ.<br>1. ಚರ್ಚ್ ದುರಸ್ಥಿ/ನವೀಕರಣ ಜೀರ್ಣೋದ್ಧಾರ<br>2. ಸಮುದಾಯ ಭವನ ನಿರ್ಮಾಣ<br>3. ಸ್ಮಶಾನ ಆವರಣಗೋಡೆ ನಿರ್ಮಾಣ<br>4. ಚರ್ಚ್ ಆವರಣಗೋಡೆ ನಿರ್ಮಾಣ<br>5. ವೃದ್ಧಾಶ್ರಮ/ಅನಾಥಾಶ್ರಮ ಸಹಾಯಾನುದಾನ<br>6. ಹೆಚ್.ಐ.ವಿ/ಏಡ್ಸ್ ಸೋಂಕಿತ ಮಕ್ಕಳಿಗೆ ಸಹಾಯಾನುದಾನ<br>7. ಇತರೆ ಮೂಲಭೂತ ಸೌಕರ್ಯಗಳಿಗೆ |

| | | |
|---|---|---|
| ಇ) | ಕ್ರೈಸ್ತ ಅಭಿವೃದ್ಧಿ ನಿಗಮ ಪ್ರಾರಂಭಗೊಳ್ಳುವುದರಿಂದ ಸ್ಥಾಪಿಸಲು ಉದ್ದೇಶಿಸಿರುವ ಕ್ರೈಸ್ತ ಅಭಿವೃದ್ಧಿ ನಿಗಮದ ಯೋಜನೆಗಳಿಂದ ಕ್ರೈಸ್ತ ಸಮುದಾಯಕ್ಕೆ ನೀಡಬೇಕಾದ ಯೋಜನೆ ಸ್ಥಗಿತಗೊಂಡಿರುವುದು ಸರಿಯೇ; (ವಿವರ ನೀಡುವುದು) | 2023-24ನೇ ಸಾಲಿನಲ್ಲಿರುವ ಕ್ರಿಶ್ಚಿಯನ್ ಸಮುದಾಯದ ಯೋಜನೆಗಳನ್ನು 2024-25ನೇ ಸಾಲಿಗೆ ಮುಂದುವರೆಸಲಾಗಿದೆ. ಸರ್ಕಾರದ ಆದೇಶವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ) | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕ್ರೈಸ್ತ ಅಭಿವೃದ್ಧಿ ಪರಿಷತ್ತನ್ನು ಮುಂದುವರೆಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ? | ಪ್ರಸ್ತುತ ಕ್ರಿಶ್ಚಿಯನ್ ಅಭಿವೃದ್ಧಿ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. |

**ಸಂಖ್ಯೆ: MWD 216 LMQ 2024**

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2024-25ನೇ ಸಾಲಿಗೆ ಮುಂದುವರೆಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 05 ಬಿಪಿಇ 2024, ದಿನಾಂಕ:01-04-2024.
2. ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 02 ಟಿಎಫ್‌ಪಿ 2024, ದಿನಾಂಕ:01-04-2024.

**ಪ್ರಸ್ತಾವನೆ:**

2024-25ನೇ ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-5, ಬೇಡಿಕೆ ಸಂಖ್ಯೆ (10)ರಲ್ಲಿ ವ್ಯಕ್ತವಾದಂತೆ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ವಿವಿಧ ಯೋಜನಾ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (1)ರಲ್ಲಿನ ಅಧಿಕೃತ ಜ್ಞಾಪನದಲ್ಲಿ ಆರ್ಥಿಕ ಇಲಾಖೆಯು 1ನೇ ಏಪ್ರಿಲ್ 2024 ರಿಂದ 31 ಮಾರ್ಚ್ 2025ರವರಗಿನ ಅವಧಿಯ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ರಾಜ್ಯ ವಿಧಾನ ಮಂಡಲವು ಅನುಮೋದಿಸಿರುವ ಬಗ್ಗೆ ಹಾಗೂ 2024-25ನೇ ಸಾಲಿನ ಪೂರ್ಣ ವರ್ಷಕ್ಕಾಗಿ ವೆಚ್ಚ ಮಾಡಲು ಅನುಮತಿ ನೀಡುವ ಕುರಿತು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ (2)ರಲ್ಲಿನ ಸರ್ಕಾರದ ಆದೇಶದಲ್ಲಿ ಆರ್ಥಿಕ ಇಲಾಖೆಯು 2024-25ನೇ ಆರ್ಥಿಕ ವರ್ಷದಲ್ಲಿ ಮುಂದುವರೆದ ಅನುಮೋದನೆಗೊಂಡಿರುವ ಯೋಜನೆಗಳಿಗೆ ಮಾತ್ರ ಅನುದಾನವನ್ನು ಬಿಡುಗಡೆಗೊಳಿಸಲು ಅನುಮತಿ ನೀಡಿರುತ್ತದೆ.

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಅಧೀನದಲ್ಲಿ ಬರುವ ಇಲಾಖೆ/ ನಿಗಮ/ಮಂಡಳಿ/ ಆಯೋಗ/ ಅಕಾಡೆಮಿಗಳಿಗೆ ಆಯವ್ಯಯ ಅಂದಾಜಿನನ್ವಯ ಕೂಲಂಕಷವಾಗಿ ಪರಿಶೀಲಿಸಿ, 2023-24ನೇ ಸಾಲಿನ ಚಾಲ್ತಿಯೋಜನೆಯ ರೂಪದಲ್ಲಿ ಮುಂದುವರೆಸಲಾಗಿದ್ದ/ ಅನುಷ್ಠಾನಗೊಳಿಸಲಾಗುತ್ತಿದ್ದ ರಾಜ್ಯ ವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳನ್ನು ಚಾಲ್ತಿ ಯೋಜನೆ ರೂಪದಲ್ಲಿ ಮುಂದುವರೆಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ:MWD 182 MDS 2024, ದಿನಾಂಕ:04-04-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2023-24ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಅಧೀನದಲ್ಲಿ ಬರುವ ಇಲಾಖೆ/ ನಿಗಮ/ ಮಂಡಳಿ/ ಆಯೋಗ/ ಅಕಾಡೆಮಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದ ಈ ಕೆಳಕಂಡ ವಿವಿಧ ರಾಜ್ಯ ವಲಯದ ಹಾಗೂ ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳನ್ನು ಚಾಲ್ತಿ ಯೋಜನೆಗಳೆಂದು ಪರಿಗಣಿಸಿ, ಅವುಗಳಲ್ಲಿ 2023-24ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಎಲ್ಲಾ ಘಟಕಗಳ ಸಮೇತ (All components) 2024-25ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಆಯವ್ಯಯದನ್ವಯ ದಿ:01.04.2024 ರಿಂದ 31.03.2025ರವರೆಗೆ ಮುಂದುವರೆಸಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

.......2.

Scanned with CamScanner

| ಕ್ರ.ಸಂ | ಯೋಜನೆಗಳ ವಿವರ | ಲೆಕ್ಕ ಶೀರ್ಷಿಕೆ | 2024-25 ನೇ ಸಾಲಿಗೆ ಒದಗಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ) |
|---|---|---|---|
| ಅಲ್ಪಸಂಖ್ಯಾತರ ನಿರ್ದೇಶನಾಲಯ | | | |
| 1 | ಅಲ್ಪಸಂಖ್ಯಾತರ ನಿರ್ದೇಶಕರು.<br>Director of Minorities | 2225-04-001-0-03 (002)(003)(004)(011)(014)(015) (020)(021)(034)(035)(041)(050) (051)(052)(053)(071)(195) | 1718.44 |
| 2 | ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ<br>Development of Christian Community | 2225-04-102-0-04(059) | 8500.00 |
| 3 | ಜೈನ್, ಬೌದ್ಧ ಮತ್ತು ಸಿಖ್ ಸಮುದಾಯಗಳ ಅಭಿವೃದ್ಧಿ<br>Development of Jain, Buddhist and Sikh Community. | 2225-04-102-0-05(103)(117) | 4000.00 |
| 4 | ಅಲ್ಪಸಂಖ್ಯಾತರಿಗಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮ.<br>Various Development Programmes for Minorities | 2225-04-102-0-10(059) | 13500.00 |
| 5 | ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ.<br>Incentive for Minority Students. | 2225-04-277-0-03(051) | 800.00 |
| 6 | ಅಲ್ಪಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ<br>Training to Competitive Exams . | 2225-04-277-0-06 (059) | 1715.00 |
| 7 | ಮದರಸಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಕಾರ್ಯಕ್ರಮ ಸಹಾಯಾನುದಾನ-ಸಾಮಾನ್ಯ<br>Providing Quality Education in Madarasa. Grants-in-Aid -General. | 2225-04-277-0-07(103) | 500.00 |

......3

Scanned with CamScanner

ಶಾಲಿನಲ್ಲಿ ಶಾನ್ಯ

| ಕ್ರ. ಸಂ | ಯೋಜನೆಗಳ ವಿವರ | ಲೆಕ್ಕ ಶೀರ್ಷಿಕೆ | 2024-25 ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ) |
|---|---|---|---|
| 8 | ಅಲ್ಪಸಂಖ್ಯಾತರಿಗಾಗಿ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ. Scolarship for Minorities and fees re-imbursement. | 2225-04-277-0-04 (051) (177) | 19000.00 |
| 9 | ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆ. Vidyasiri Schemes for Minorities Students. | 2225-04-277-0-05(059) | 2499.00 |
| 10 | ಮೌಲಾನ ಆಜಾದ್ ಶಾಲೆಗಳ ನಿರ್ವಹಣೆ. Maintenance of Moulana Azad Schools. | 2225-04-277-0-09 (002)(003)(004)(011)(014) (020)(021)(034)(041)(052) (059)(071)(221) | 9622.68 |
| 11 | ಅಲ್ಪಸಂಖ್ಯಾತರ ವಸತಿ ಶಾಲೆಗಳು Minorities Residential Schools | 2225-04-277-0-10 (002)(003)(004)(011)(014) (020)(021)(034)(041)(051) (052) (059)(071)(133)(221) | 36396.00 |
| 12 | ಅಲ್ಪಸಂಖ್ಯಾತರಿಗಾಗಿ ವಸತಿ ನಿಲಯ ಮತ್ತು ವಸತಿ ಶಾಲೆ ಕಟ್ಟಡಗಳ ನಿರ್ಮಾಣ ಮಹತ್ವ ಕಾಂಕ್ಷೆಯ ತಾಲ್ಲೂಕ (Aspirational Taluka) ನಿರ್ಮಾಣ(Construction) Construction of Hostels and Residential School Buildings for Minorities. | 4225-04-190-0-03 (133)(386) | 60000.00 |
| 13 | ನಗರ ಪ್ರದೇಶಗಳಲ್ಲಿನ ಅಲ್ಪಸಂಖ್ಯಾತರ ಸ್ಲಮ್/ ಕಾಲೋನಿ ಅಭಿವೃದ್ಧಿ ಯೋಜನೆ. Minorities Slums/Colony Development programme in 11 Corporation | 4225-04-102-0-01(386) | 40000.00 |
| 14 | ಅಲ್ಪಸಂಖ್ಯಾತರಿಗಾಗಿ ಮುಖ್ಯಮಂತ್ರಿ ವಿಶೇಷ ಅಬಿವೃದ್ಧಿ ಯೋಜನೆ CM Special development programme for Minorities. | 4225-04-102-0-02(132) | 10000.00 |

.......4

Scanned with CamScanner

| ಕ್ರ. ಸಂ | ಯೋಜನೆಗಳ ವಿವರ | ಲೆಕ್ಕ ಶೀರ್ಷಿಕೆ | 2024-25 ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ) |
|---|---|---|---|
| 15 | ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ<br>ಕೇಂದ್ರ ಪುರಸ್ಕೃತ ಯೋಜನೆ<br>Pradhan Mantri Jana Vikas Programme | 2225-04-102-0-08(059)<br>(State Share)<br>2225-04-102-0-02(059)<br>(Central Share) | 13300.00<br><br>16500.00 |
| | | ಒಟ್ಟು ರೂ. | 238051.12 |
| | **ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ** | | |
| 1 | ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇತರೆ ವೆಚ್ಚಗಳು.<br>Minorities Development Corporation other expenses | 2225-04-102-0-01(059)<br>(103) | 9000.00 |
| 2 | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ (ಬಂಡವಾಳ ಹೂಡಿಕೆ)<br>(Karnataka Minorities Development Corporation Ltd) Share Capital | 4225-04-190-0-02(211) | 4000.00 |
| | | ಒಟ್ಟು ರೂ. | **13000.00** |
| | **ಕರ್ನಾಟಕ ರಾಜ್ಯ ವಕ್ಫ್ ಮಂಡಳಿ** | | |
| 1 | ಕರ್ನಾಟಕ ರಾಜ್ಯ ವಕ್ಫ್ ಮಂಡಳಿ<br>Karnataka state Wakf Board | 2225-04-001-0-02<br>(101)(103)(115)(118) | 1897.58 |
| 2 | ವಕ್ಫ್ ಸಂಸ್ಥೆಗಳಲ್ಲಿನ ಪೇಶ್ ಇಮಾಮ್ ಮತ್ತು ಮೌಜನ್ನರ ಸಂಭಾವನೆ.<br>Remuneration to Pesh Imam and Mouzan of Wakf Institutions. | 2225-04-102-0-11 (015) | 8368.00 |
| 3 | ಕರ್ನಾಟಕ ರಾಜ್ಯ ವಕ್ಫ್ ಆಸ್ತಿಗಳ ಸಂರಕ್ಷಣೆ.<br>Protection of Wakf Properties | 2225-04-102-0-03 (059) | 5000.00 |
| 4 | ಅಲ್ಪಸಂಖ್ಯಾತರ ಧಾರ್ಮಿಕ ಸಂಸ್ಥೆಗಳಿಗೆ ತಸ್ದೀಕ್ ಮತ್ತು ವರ್ಷಾಸನ.<br>Annual allowance and Thasdik to Minority religious institutions. | 2225-04-102-0-09(100) | 520.80 |
| | | ಒಟ್ಟು | **15786.38** |

......5

| ಕ್ರ. ಸಂ | ಯೋಜನೆಗಳ ವಿವರ | ಲೆಕ್ಕ ಶೀರ್ಷಿಕೆ | 2024-25 ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ) |
|---|---|---|---|
| | **ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ** | | |
| 1 | ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ವೇತನ<br>Grants for Karnataka State Minorities Commission | 2225-04-001-0-01(101) (103) (115) | **238.04** |
| | **ಕರ್ನಾಟಕ ಉರ್ದು ಅಕಾಡೆಮಿ** | | |
| 1 | ಕರ್ನಾಟಕ ಉರ್ದು ಅಕಾಡೆಮಿ<br>Karnataka Urdu Academy | 2225-04-277-0-08 (103) | **150.00** |

**ಘೋಷ್ವಾರೆ**

| ಕ್ರ. ಸಂ. | ಇಲಾಖೆ | 2024-25ನೇ ಸಾಲಿನಲ್ಲಿ ಒದಗಿಸಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಅಲ್ಪಸಂಖ್ಯಾತರ ನಿರ್ದೇಶನಾಲಯ | 238051.12 |
| 2 | ಕರ್ನಾಟಕ ರಾಜ್ಯ ವಕ್ಫ್ ಮಂಡಳಿ | 15786.38 |
| 3 | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ. | 13000.00 |
| 4 | ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ | 238.04 |
| 5 | ಕರ್ನಾಟಕ ಉರ್ದು ಅಕಾಡೆಮಿ | 150.00 |
| | ಒಟ್ಟು ರೂ. | **267225.54** |

**ಷರತ್ತುಗಳು:-**

1. 2024-25ನೇ ಸಾಲಿನಲ್ಲಿ ಚಾಲ್ತಿ ಯೋಜನೆ ರೂಪದಲ್ಲಿ ಮುಂದುವರೆಸಲು ನಿರ್ಧರಿಸಲಾಗಿರುವ ಎಲ್ಲಾ ಯೋಜನಾ ಕಾರ್ಯಕ್ರಮಗಳನ್ನು ಆಯವ್ಯಯದಲ್ಲಿ ಅವುಗಳಿಗೆ ಮೀಸಲಿಟ್ಟ ಅನುದಾನಕ್ಕೆ ಮೀರದಂತೆ ಅನುಷ್ಠಾನಗೊಳಿಸತಕ್ಕದ್ದು.
2. ಬದ್ಧವಲ್ಲದ ಅನುದಾನಕ್ಕೆ ಆರ್ಥಿಕ ಇಲಾಖೆಯು ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿ/ ಸುತ್ತೋಲೆಯಗಳನ್ನಯ ಕ್ಲುಪ್ತ ವೇಳೆಯೊಳಗೆ ಕ್ರಿಯಾ ಯೋಜನೆಗಳಿಗೆ ಅನುಮೋದನೆಯನ್ನು ಪಡೆದು ಅನುಷ್ಠಾನಗೊಳಿಸುವುದು.
3. 2024-25ನೇ ಸಾಲಿನಲ್ಲಿ ಮುಂದುವರೆಸಲಾದ ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ನೀಡುವ ಆಡಳಿತಾತ್ಮಕ ಮಂಜೂರಾತಿ, ಮರು ಮೌಲ್ವೀಕರಣ ಅನುಮತಿ, ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ಅನುದಾನದ ಬಿಡುಗಡೆಗೆ ಅನುಗುಣವಾಗಿ ಮಾತ್ರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು. ಕಾರ್ಯಕ್ರಮ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ಆಗಿಂದ್ದಾಗೆ ನೀಡುವ ಮಾರ್ಗಸೂಚಿ ಪ್ರಕಾರವೇ ಯೋಜನೆಗಳನ್ನು ಅನುಷ್ಠಾನಗೊಳಿಸತಕ್ಕದ್ದು.

......6

Scanned with CamScanner

4. 2023-24ನೇ ಸಾಲಿನಲ್ಲಿದ್ದ ಯೋಜನೆ ಕಾರ್ಯಕ್ರಮಗಳ ಘಟಕಗಳಿಗೆ ಮಾತ್ರ 2024-25ನೇ ಸಾಲಿನಲ್ಲಿ ಮುಂದುವರೆಸಲು ಮಂಜೂರಾತಿ ನೀಡಲಾಗಿರುತ್ತದೆ. ಆದರೆ ಇಲಾಖಾ ಮುಖ್ಯಸ್ಥರು 2024-25ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಯಾವುದೇ ಹೊಸ ಘಟಕ ಸೇರ್ಪಡೆ/ ಘಟಕ ಪರಿವರ್ತನೆ/ಘಟಕ ಮಾರ್ಪಾಡುಗಳನ್ನು ಮಾಡಬೇಕಾದಲ್ಲಿ ಅಂತಹ ಯೋಜನೆಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ, ಸರ್ಕಾರದ ಅನುಮೋದನೆ / ಆದೇಶ ಪಡೆದ ನಂತರವಷ್ಟೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.

5. ಚಾಲ್ತಿ ಯೋಜನೆ ರೂಪದಲ್ಲಿ ಮುಂದುವರೆಸಲು ಆದೇಶಿಸಲಾಗಿರುವ ಯೋಜನಾ ಕಾರ್ಯಕ್ರಮಗಳಲ್ಲಿ ಗಣಕ ಯಂತ್ರಗಳ ಖರೀದಿ ಒಳಗೊಂಡಿದ್ದಲ್ಲಿ ಅವುಗಳನ್ನು ಖರೀದಿಸುವ ಮುನ್ನ ಈ ಕುರಿತ ಪ್ರಸ್ತಾವನೆಯನ್ನು ಇಲಾಖಾ ಮಟ್ಟದ TAP ಸಮಿತಿಯ ಅನುಮೋದನೆ ಪಡೆದ ನಂತರ ಮಾತ್ರ ಖರೀದಿಸತಕ್ಕದ್ದು. ಮುಂದುವರೆದು, ಇ-ಆಡಳಿತ ಯೋಜನೆಗಳನ್ನು ಇಲಾಖೆಗಳು ಜಾರಿಗೊಳಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/147/ಇಆಇ/2009, ದಿನಾಂಕ:15-02-2010ರನ್ವಯ ಹಾಗೂ 2024-25ನೇ ಸಾಲಿನಲ್ಲಿ ಇ-ಆಡಳಿತ ಇಲಾಖೆಯು ಈ ಬಗ್ಗೆ ಮಾರ್ಗದರ್ಶನ/ ಸೂಚನೆಗಳನ್ನು ನೀಡಿದಲ್ಲಿ ಅದರನ್ವಯ ಕ್ರಮ ಕೈಗೊಳ್ಳತಕ್ಕದ್ದು.

6. 2024-25ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ನಿಗಧಿಪಡಿಸಲಾದ ಅನುದಾನಕ್ಕೆ ಸೂಕ್ತ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಅನುಮೋದನೆ ಪಡೆದ ನಂತರವಷ್ಟೆ ಸಮರ್ಪಕವಾಗಿ ಅನುಷ್ಠಾನಗೊಳಿಸತಕ್ಕದ್ದು.

7. ಇಲಾಖಾ ಮುಖ್ಯಸ್ಥರು 2024-25ನೇ ಸಾಲಿನಲ್ಲಿ ಚಾಲ್ತಿ ರೂಪದಲ್ಲಿ ಮುಂದುವರಿಸಲಾದ ಯೋಜನಾ ಕಾರ್ಯಕ್ರಮಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಪ್ರಸ್ತಾವನೆಗಳನ್ನು ಕಾಲಕಾಲಕ್ಕೆ ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

8. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರಲ್ಲಿ ಹಾಗೂ ಅದರಡಿಯ ನಿಯಮಾವಳಿ ಸುತ್ತೋಲೆ ಇತ್ಯಾದಿಗಳಲ್ಲಿ ಸೂಚಿಸಿರುವಂತೆ ಪರಿಶೀಲಿಸಿ ಕ್ರಮ ಜರುಗಿಸತಕ್ಕದ್ದು.

9. 2024-25ನೇ ಸಾಲಿನಲ್ಲಿ ಮುಂದುವರೆಸಲಾಗಿರುವ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ (Grant in aid ಸೇರಿದಂತೆ) ಹೊರಗಿನ ಸಂಘ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸದರಿ ಸಂಸ್ಥೆಗಳು ಸಲ್ಲಿಸುವ ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಇಲಾಖೆ/ ನಿಗಮ/ಮಂಡಳಿ/ ಆಯೋಗ/ಅಕಾಡೆಮಿಗಳಿಗೆ ನೀಡಲಾಗಿದೆ.

10. ಫಲಾನುಭವಿ ಆಧಾರಿತ ನಿಗದಿತ ಕಾರ್ಯಕ್ರಮಗಳಲ್ಲಿ ಶೇ33ರಷ್ಟನ್ನು ಮಹಿಳೆಯರ ಅಭಿವೃದ್ಧಿಗಾಗಿ ಮೀಸಲಿಡತಕ್ಕದ್ದು.

......7

Scanned with CamScanner

11. ಪ್ರತಿ ತಿಂಗಳು ಇಲಾಖಾ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮಾಸಿಕ ಕಾರ್ಯಕ್ರಮಗಳ ವೇಳಾಪಟ್ಟಿ (MPIC) ಅನ್ವಯ ನಡೆಯುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಷಯವನ್ನು ಚರ್ಚಿಸಲು ಅನುಕೂಲವಾಗುವಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವರದಿಯನ್ನು ಅವಲೋಕನ ತಂತ್ರಾಂಶದಲ್ಲಿ ಪ್ರತಿ ತಿಂಗಳು 12ನೇ ತಾರೀಖಿನೊಳಗೆ ದಾಖಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು
ವಕ್ಫ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ವಸಂತನಗರ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಕೆ.ಎಂ.ಡಿ.ಸಿ. ಭವನ, ಶೇಷಾದ್ರಿಪುರಂ, ಬೆಂಗಳೂರು.
4. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಕೆ.ಎಂ.ಡಿ.ಸಿ. ಭವನ, ಶೇಷಾದ್ರಿಪುರಂ, ಬೆಂಗಳೂರು.
6. ರಿಜಿಸ್ಟ್ರಾರ್, ಕರ್ನಾಟಕ ಉರ್ದು ಅಕಾಡೆಮಿ, ಕೆ.ಎಂ.ಡಿ.ಸಿ. ಭವನ, ಶೇಷಾದ್ರಿಪುರಂ, ಬೆಂಗಳೂರು.
7. ಎಲ್ಲಾ ಜಿಲ್ಲಾಧಿಕಾರಿಗಳು (ನಿರ್ದೇಶಕರ ಮುಖಾಂತರ)
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
9. ಜಂಟಿ ನಿರ್ದೇಶಕರು, ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
10. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ನಿರ್ದೇಶಕರ ಮುಖಾಂತರ).
11. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು, (ನಿರ್ದೇಶಕರ ಮುಖಾಂತರ).
12. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ 3 & 9) 2ನೇ ಮಹಡಿ, ವಿಧಾನ ಸೌಧ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**<u>ಪ್ರತಿ ಮಾಹಿತಿಗಾಗಿ:</u>**

1. ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
4. ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ (24X7), ವಸಂತನಗರ, ಬೆಂಗಳೂರು.

Scanned with CamScanner